ಅ) ಇದರಿಂದ 275 ಲಕ್ಷಗಳ ವಾರ್ಷಿಕ ಆದಾಯ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆ.

ಇ) ಕೊಳ್ಳೇಗಾಲ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಬಹಳಷ್ಟು ಕಲ್ಲುಗಣಿ ಗುತ್ತಿಗೆಗಳು ಮಲೆಮಹದೇಶ್ವರ ಬೆಟ್ಟದ ಅರಣ್ಯ ಪ್ರದೇಶಗಳಲ್ಲಿದ್ದು ಈ ಪ್ರದೇಶದಲ್ಲಿ ಗಂಧದ ಕಳ್ಳ ಸಾಗಾಣಿಕೆ ಮತ್ತು ಆನೆಯನ್ನು ಕೊಂದು ದಂತವನ್ನು ಕದಿಯುವ ಕೆಲಸದಲ್ಲಿ ವೀರಪ್ಪನ್ ಮತ್ತು ಆತನ ಸಹಚರರು ನಿರತರಾಗಿರುವುದರಿಂದ, ಆತನನ್ನು ಬಂಧಿಸುವ ಪ್ರಯತ್ನ ವಿಶೇಷ ಪಡೆಯ ಕಾರ್ಯಚರಣೇರೀತ್ಯಾ ಸತತವಾಗಿ ನಡೆಯುತ್ತಿದೆ. ಈ ಸನ್ನಿವೇಶದಲ್ಲಿ ಕಲ್ಲು ಗಣಿಗಾರಿಕೆಯನ್ನು ಪ್ರಾರಂಭಿಸಿದರೆ ಅವರನ್ನು ಬಂಧಿಸುವ ಕಾರ್ಯಕ್ಕೆ ಧಕ್ಕೆ ಉಂಟಾಗುವುದೆಂಬ ಕಾರಣದಿಂದ ಕಲ್ಲು ಗಣಿಕಾರಿಕೆಗೆ ಅನುಮತಿ ನೀಡುವುದಿಲ್ಲ.

ರೇಷ್ಮೆ ವಿನಿಮಯ ಕೇಂದ್ರಗಳ ಬಗ್ಗೆ

409 - ಶ್ರೀ ವಿ. ರಾಮದಾಸ್ (ಕೃಷ್ಣರಾಜ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. *ಸರ್ಕಾರದ ರೇಷ್ಮೆ ವಿನಿಮಯ ಕೇಂದ್ರಗಳಿಗೆ ಬರದೆ ಅಕ್ರಮವಾಗಿ ಬೇರೆ ಬೇರೆ ರಾಜ್ಯಗಳಿಗೆ ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ. *ಹಾಗಿದ್ದಲ್ಲಿ, ಆ ಅಕ್ರಮ ಸಾಕಾಣಿಕೆದಾರರ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು ಮತ್ತು ವಶಪಡಿಸಿಕೊಳ್ಳಲಾದ ಅಕ್ರಮ ರೇಷ್ಮೆಯ ಒಟ್ಟು ಪ್ರಮಾಣವೆಷ್ಟು?*

ಇ. *ಅಕ್ರಮವಾಗಿ ರೇಷ್ಮೆಯನ್ನು ಸಾಗಣೆ ಮಾಡುವ ವ್ಯಕ್ತಿಗಳಿಗೆ ಯಾವ ರೀತಿ ಶಿಕ್ಷೆಯನ್ನು ವಿಧಿಸಲಾಗುವುದು?*

ಈ. *ಕಳೆದ ಒಂದು ವರ್ಷದಲ್ಲಿ ಪ್ರತಿ ತಿಂಗಳು ಸಂಗ್ರಹಿಸಲಾದ ದಂಡವೆಷ್ಟು?*

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ಹೌದು.

ಆ) ಇಲಾಖೆಯು ಈ ರೀತಿಯ ಅನಧಿಕೃತ ರೇಷ್ಮೆ ಸಾಗಾಣಿಕೆದಾರರ ಮತ್ತು ವ್ಯವಹಾರದಲ್ಲಿ ತೊಡಗಿರುವವರ ವಿರುದ್ಧ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ.

1999-2000ದ ಸಾಲಿನ ಫೆಬ್ರವರಿ ಅಂತ್ಯಕ್ಕೆ 3260 ಪ್ರಕರಣಗಳನ್ನು ದಾಖಲು ಮಾಡಿದ್ದು, 88,612 ಕೆ.ಜಿ. ರೇಷ್ಮೆಯನ್ನು ವಶಪಡಿಸಿಕೊಳ್ಳಲಾಗಿದೆ ಹಾಗೂ 964.300 ಕೆ.ಜಿ. ರೇಷ್ಮೆಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಇ) ರೇಷ್ಮೆ ಕಾಯಿದೆ ಸೆಕ್ಷನ್ 12, 13, 14ರನ್ವಯ ಈ ರೀತಿ ಕಾನೂನು ಬಾಹಿರವಾಗಿ ರೇಷ್ಮೆ ಸಾಗಾಣಿಕೆ ಮಾಡುವ ಮತ್ತು ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿಗಳಿಗೆ ದಂಡ ಹಾಕಲಾಗುತ್ತಿದೆ.

ರೇಷ್ಮೆ ನೂಲನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕುವ ಅವಕಾಶ ಹಾಗೂ ನ್ಯಾಯಾಲಯಗಳ ಮೂಲಕ 3 ವರ್ಷಗಳ ತನಕ ಸಜೆ ವಿಧಿಸುವ ಅವಕಾಶ ಮಾಡಲಾಗಿದೆ.

ಈ) 1999-2000ದ ಸಾಲಿನಲ್ಲಿ ಫೆಬ್ರವರಿ ಅಂತ್ಯಕ್ಕೆ ಒಟ್ಟು ರೂ. 69,87,558-00 ಗಳನ್ನು ದಂಡವಾಗಿ ಸಂಗ್ರಹಿಸಲಾಗಿದೆ. ಮಾಹೆವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

1999-2000ನೇ ಸಾಲಿನ ಫೆಬ್ರವರಿ 2000 ದವರೆಗೆ ರೇಷ್ಮೆ ಕಾಯಿದೆ ಜಾರಿ ವಿಭಾಗದ ಪ್ರಗತಿ ಸಾಧನೆಯ ವಿವರಗಳು (ತಿಂಗಳುವಾರು)

ಕ್ರ ಸಂ	ಮಾಹೆ	ದಾಖಲಾದ ಪ್ರಕರಣಗಳ ಸಂಖ್ಯೆ	ವಶಪಡಿಸಿಕೊಂಡ ರೇಷ್ಮೆ ಪ್ರಮಾಣ ಕೆ.ಜಿ.ಗಳಲ್ಲಿ	ಮುಟ್ಟುಗೋಲು ಹಾಕಿಕೊಂಡು ರೇಷ್ಮೆ ಪ್ರಮಾಣ ಕೆ.ಜಿ.ಗಳಲ್ಲಿ	ವಸೂಲಾದ ದಂಡ ರೂ.ಗಳಲ್ಲಿ
1.	ಏಪ್ರಿಲ್ 99	263	4,781.450	-	3,00,463.00
2.	ಮೇ 99	272	7,166.530	-	6,18,852.00
3.	ಜೂನ್ 99	305	12,740.710	-	3,74,787.00
4.	ಜುಲೈ 99	289	6,017.310	-	5,71,001.00
5.	ಆಗಸ್ಟ್ 99	212	7,094.000	-	7,38,641.00
6.	ಸೆಪ್ಟೆಂಬರ್ 99	302	6,579.090	-	5,02,834.00
7.	ಅಕ್ಟೋಬರ್ 99	311	6,181,125	-	4,40,226.00
8.	ನವೆಂಬರ್ 99	378	10,642.095	-	7.05,505.00
9.	ಡಿಸೆಂಬರ್ 99	407	11,671,410	260.00	10,97,220.00
10	ಜನವರಿ 2000	310	8,539.825	704.30	9,59,559.00
11.	ಫೆಬ್ರವರಿ 2000	211	7,198.510	-	6,78,470.00
	ಒಟ್ಟು	**3260**	**88,612.055**	**964.300**	**690,87,558.00**

ಮೈಸೂರು ಮಹಾನಗರ ಪಾಲಿಕೆಯಲ್ಲಿ ಮನೆ ಕಂದಾಯ, ನೀರಿನ ಕಂದಾಯ ವಸೂಲಾತಿ

410 - ಶ್ರೀ ಎ. ರಾಮದಾಸ್ (ಕೃಷ್ಣರಾಜ) :ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಮೈಸೂರು ಮಹಾನಗರ ಪಾಲಿಕೆಯಲ್ಲಿ ವಸೂಲಾದ ಮನೆ ಕಂದಾಯ, ನೀರಿನ ಕಂದಾಯ, ನಗರ ಪಾಲಿಕೆ ಆಸ್ತಿ ಬಾಡಿಗೆ ಎಷ್ಟು?